CAREERINDIA

Language Code : **07**

इस पुस्तिका में **20** मुद्रित पृष्ठ हैं।
This booklet contains **20** Printed pages.

# SED-24-I

**प्रश्न-पत्र-I / PAPER-I**
**कन्नड़ भाषा परिशिष्ट**
**Kannada Language Supplement**
**भाग-IV & V / PART-IV & V**

**मुख्य परीक्षा पुस्तिका संख्या / Main Test Booklet No.**

**मुख्य परीक्षा पुस्तिका कोड / Main Test Booklet Code**

**J**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं OMR उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **J**। यह सुनिश्चित कर लें कि इस भाषा परिशिष्ट पुस्तिका का संकेत, OMR उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/ marking responses in the OMR Answer Sheet.
5. The CODE for this Language Booklet is **J**. Make sure that the CODE printed on **Side-2** of the OMR Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language-I (Kannada) (Q. 91 to Q. 120)
   Part-V : Language-II (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ______________________
Name of the Candidate (in Capitals) :
अनुक्रमांक : (अंकों में) / Roll Number : in figures ______________________
: शब्दों में / in words ______________________
परीक्षा केन्द्र (बड़े अक्षरों में) : ______________________
Centre of Examination (in Capitals) :
परीक्षार्थी के हस्ताक्षर : ______________________ निरीक्षक के हस्ताक्षर : ______________________
Candidate's Signature : Invigilator's Signature :
Facsimile Signature Stamp of
Centre Superintendent : ______________________

www.careerindia.com

CAREERINDIA

Language Code : **07**

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# SED-24-I

## ಪ್ರಶ್ನೆ ಪತ್ರಿಕೆ–I
## ಕನ್ನಡ ಭಾಷಾ ಪೂರಕ
### ಭಾಗ IV ಮತ್ತು V

ಪ್ರಶ್ನೆ ಪುಸ್ತಿಕೆ ಸಂಕೇತ

**J**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ.**
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು OMR ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ J** ಆಗಿದೆ. OMR ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.
   ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ** ಮನವಿ ಮಾಡಿ. ನಿಮ್ಮ ಮನವಿ **ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ____________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ____________________

: (ಅಕ್ಷರಗಳಲ್ಲಿ) : ____________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ____________________

ಪರೀಕ್ಷಾರ್ಥಿಯ ಸಹಿ : ____________________ ನಿರೀಕ್ಷಕರ ಸಹಿ : ____________________

Facsimile signature stamp of
Centre Superintendent : ____________________

www.careerindia.com

CAREERINDIA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 91 - 120**) ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

www.careerindia.com

CAREERINDIA

# PART–IV
## LANGUAGE-I
## KANNADA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **91-120**) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91-99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಚಿನುಗ ಕುಲದ ಯಜಮಾನ. ಸದಾ ಮೈಮೇಲೆ ಅರೆತೋಳಿನ ಒಂದು ದಪ್ಪನೆಯ ಬನೀನು. ಸೊಂಟದಿಂದ ಮೊಣಕಾಲಿನವರೆಗಿನ ಮಾಸಿದ ತುಂಡು ಕಚ್ಚೆ ಪಂಚೆ, ಹೆಗಲ ಮೇಲೆ ಅಷ್ಟೇ ಮಾಸಿದ ಒಂದು ಟವಲ್ಲು. ಇಪ್ಪತ್ತೆಂಟು ತೇಪೆ ಹಾಕಿದ ದಪ್ಪನೆಯ ಜೋಡು, ಅವನ ಭಾಷೆಯಲ್ಲಿ ಹೇಳಬೇಕೆಂದರೆ ಜೋಡಲ್ಲ ಎಕ್ಕಡ. ಇವನದು ಎಂಟು ಮಕ್ಕಳ ತುಂಬು ಸಂಸಾರ. ಹಿರಿಯ ಮಗನೇ ಚಿಕ್ಕ. ಇವನ ಹಿಂದೆ ಬಸ್ಸಿ ಎನ್ನುವ ಹೆಣ್ಣು ಮಗಳು. ನಂತರ ಬಸ್ಯಾ, ನಂತರ ದುರ್ಗಿ ಹೀಗೆ ಒಂದು ಹೆಣ್ಣು ಒಂದು ಗಂಡು. ಹನುಮ, ರಂಗ, ಲಕುಮಿ, ಹೀಗೆ ನಾಲ್ಕು ಗಂಡು ನಾಲ್ಕು ಹೆಣ್ಣು ಮಕ್ಕಳ ದೊಡ್ಡ ಸಂಸಾರ.

ಚಿಕ್ಕ ಹಿರಿಯ ಮಗನಾಗಿ ಅಪ್ಪನ ಬೆನ್ನೆಲುಬಾಗಿದ್ದ. ಸ್ಕೂಲಿನ ಮೆಟ್ಟಿಲು ಹತ್ತುವುದಿರಲಿ ಆ ದಿಕ್ಕಿಗೆ ತಲೆ ಹಾಕಿ ಮಲಗಿದವನಲ್ಲ ಚಿಕ್ಕ. ಉಳಿದ ಮಕ್ಕಳ ಗಲಾಟೆ, ತುಂಟತನ ತಡೆಯಲಾರದೆ ಸ್ಕೂಲಿಗೆ ಕಳುಹಿಸಿದ್ದರು. ಇವರ ಜೊತೆ ಅಕ್ಕಪಕ್ಕದ ಮಕ್ಕಳೂ ಶಾಲೆಯ ಮೆಟ್ಟಿಲು ಹತ್ತಿದ್ದರು.

ಇವರ ಶಾಲೆ ಎಂದರೆ ಯಾವುದಾದರೂ ಮರದಡಿಯೋ ಇಲ್ಲ ಅರಳಿ ಕಟ್ಟೆಯ ಮೇಲೋ. ಇನ್ನು ಮೇಷ್ಟ್ರೋ, ಅಮಾವಾಸ್ಯೆಗೊಮ್ಮೆನೋ, ಪೌರ್ಣಮಿಗೊಮ್ಮೆನೋ ಬಂದು, ಸ್ವಾಮಿದೇವನೇ ಲೋಕಪಾಲನೇ ತೇ ನಮೋ ನಮೋಸ್ತುತೇ ಎಂದು ಪ್ರಾರ್ಥನೆ ಹೇಳಿಕೊಟ್ಟು, “ಲೇ ಕರ್ಯ ನಿನ್ನೆ ಯಾಕ್‌ಲಾ ಸ್ಕೂಲಿಗ್ ಬರ್ಲಿಲ್ಲಾ, ಲೇ ರಾಮ ನೀನ್ ಇವತ್ತ್ ಯಾಕ್ಲಾ ವತ್ತಾಗ್ ಬಂದೆ ? ಅಂದಂಗೆ ನಿಮ್ಮಂಮುಂಗೆ ಎರ್ಗೆ ಆಯ್ತೇನೋ ? ಮೂರ್ ದಿನ್‌ದಿಂದ ನೋವ್ ತಿನ್‌ತಾ ಅವ್ಳಂತೆ. ಎಷ್ಟ್‌ನೇ ಎರ್ಗೇನೋ ? ಒಟ್ಟೆಗಿಲ್ದಿದ್ರೂ ಮಕ್ಳನ್ನ ಹೆರೋದ್ರಲ್ಲಿ ನಿಸ್ಸೀಮ್ರು ಈ ನನ್ ಮಕ್ಳು”

ಅಂತ ಊರಿನ ಸಮಾಚಾರವನ್ನೆಲ್ಲಾ ಜಾಲಾಡಿ ಕೊನೆಗೆ ನಿನ್ನೆ ನಾನ್ ಏಳ್ಕೊಟ್ಟಿದ್ದೆಲ್ಲಾ ತಿಳಿತಾ ? ಎಲ್ಲಿ ಹೇಳಿ. ಒಂದೊಂದ್ಲ ಒಂದು, ಒಂದ್ ಎರಡ್ಲಾ ಎರ್ಡು, ಅಂತಾ ಹೇಳೋಷ್ಟರಲ್ಲಿ ಒಬ್ಬ “ಸಾ” ಎಂತ ಕಿರುಬೆಟ್ಟು ತೋರ್ಸಿ “ನಂಗೆ ಶಾನೇ ಅವಸರ ಸಾ” ಅಂದ್ರೆ ಇನ್ನೊಬ್ಬ ನಂಗೂ ಸಾ ಅನ್ನೋಕಿಲ್ಲಾ ಬಂದಿರೋರೆಲ್ಲಾ ನಂಗೂ ಸಾ ನಂಗೂ ಅಂತಾ ಮೇಷ್ಟ್ರು ಹೋಗಿ ಅನ್ನೋಕ್ ಮುಂಚೆ ಹೋಗ್ ಬಿಡ್‌ತಿದ್ರು, ಹೋದವರು ಅಲ್ಲೇ ನಿಂತು ಹರಟೆ ಹೊಡೆಯುತ್ತಿದ್ದವರಿಗೆ ಮೇಷ್ಟ್ರು ಎಷ್ಟೊತ್ತ್ರೋ ಅಂತ ಕೂಗಿ ಚಿಲುಪೆ ಏಟಿನ ರುಚಿ ತೋರಿಸಿದಾಗ ಏಟು ಬಿದ್ದ ಅಂಡನ್ನು ಸವರಿ ಕೊಳ್ಳುತ್ತಾ ಕೂತಾಗ ಮತ್ತೆ ಮೇಷ್ಟ್ರು ಒಂದೊಂದ್ಲಾ ಒಂದು ಅಂತ ಶುರು ಮಾಡೋಕ್ಕಿಲ್ಲಾ “ಸಾ ಇಲ್ಲಿ ಕೂಕಣಕ್ಕಾಗಾಕ್ಕಿಲ್ಲ ಇರ್ವೆ, ಇರ್ವೆ ಕಚ್ಚಾಕ್ತಾ ಇವೆ” ಅಂತಾ ಬೀರ ಅಂದ್ರೆ “ಊ ಸಾ ನಂಗೂ ಕಚ್ಚಾಕ್ತಾ ಅವೆ. ಇಲ್ಲಿ ಇರ್ವೆ ಗೂಡ್ ಅದೆ. ನಂಗೆ ಕೂಕ್ಕಣಕ್ಕಾಗಾಕ್ಕಿಲ್ಲ ಅಂತ ಕೆಂಪ ಎದ್ರೆ, ಎಲ್ಲರೂ ನಮ್ಗೂ ಕಚ್ಚಾಕ್ತಾವೆ, ನಾಳೆ ಬತ್ತೀವಿ” ಅಂತ ಮನೆ ಕಡೆ ದೌಡು. ಮಾಸ್ತರ ಕೂಗು ಕಿವಿಗೆ ಬೀಳಲೇ ಇಲ್ಲವೇನೋ ಅನ್ನುವಂತೆ ತಿರುಗಿ ನೋಡದೆ ಓಟ ಕೀಳುವರು.

ಮಾರನೇ ದಿನ ಮೇಷ್ಟ್ರ ಚಿಲುಪೆ ಕಡ್ಡಿ ಏಟಿಗೆ ಹೆದರಿ ಕೆಲವು ಹುಡುಗರು ಮನೆಯಲ್ಲಿ “ನಂಗೆ ಹೊಟ್ಟೆ ನೋವು, ನಂಗೆ ತಲೆ ನೋವು” ಅಂತ ಒಬ್ಬೊಬ್ಬರು ಒಂದೊಂದು ನೆಪ ಹೇಳಿ ಸ್ಕೂಲಿಗೆ ಚಕ್ಕರ್ ಹೊಡೀತಿದ್ರು. ಇನ್ನು ಕೆಲವರು ಸ್ಕೂಲಿಗೆ ಹೋಗ್‌ತೀವಿ ಅಂತ ಅಲ್ಲಿಲ್ಲಿ ಅಲೆಯೋಕೇ ಹೋಗಿ ಶಾಲೆ ಬಿಡೋ ಹೊತ್ಗೆ ಮನೆ ಸೇರ್‌ತಿದ್ರು ಅಪ್ಪ ಅಮ್ಮಂದಿರಿಗೆ ಇದಾವುದರ ಪರಿವೇ ಇರುತ್ತಿರಲಿಲ್ಲ.

ಮೇಷ್ಟ್ರು ನಾಳೆಯಿಂದ ಓದಕ್ಕೆ ಪುಸ್ಗ, ಬರೆಯೋಕೆ ಸ್ಲೇಟು, ಬಳಪ ತಗಂಬನ್ನಿ ಅಂದ್ರೆ, ಒಬ್ಬ ಎದ್ದು ನಿಂತು “ಮೊದ್ಲು ಬಾಯಾಗೇ ಕಲುಸ್‌ಬೇಕಂತೆ, ಆಮ್ಯಾಕೆ ಕೈಯಾಗೆ ಕಲುಸ್ ಬೇಕಂತೆ. ಬಾಯ್‌ಗೆ ಬಂದ್ರೆ ಕೈಗೆ ಅದ್ರಷ್ಟಕ್ಕದೇ ಬತ್ತಾದಂತೆ ಅಂತ ನಿಮ್ ಮೇಷ್ಟ್ರುಗೆ ಯೇಳು ಅಂತಾ ನಮ್ಮಯ್ಯ ಯೋಳ್ದಾ” ಅಂತ ಅಂದ್ರೆ, ಮತ್ತೊಬ್ಬ “ನಮ್ಮಮ್ಮನ್ ತಾವ ಈಗೊಂದ್ ಬಿಡ್‌ಕಾಸೂ ಇಲ್ಲವಂತೆ, ಯಾವಾಗಾನಾ ಸಿಕ್ರೆ ನೋಡಾನಾ ಸದ್ಯಕ್ಕೆ ಬಾಯಾಗೇ ಯೋಳುಸ್ಕಂಡು ಬಾ ಅಂತ ಅಂದ್ಲು” ಅಂತ ವರದಿ ಒಪ್ಪಿಸಿದ ಚಿಕ್ಕದ್ರ.

91. ಕಿವಿಗೆ – ಪದದಲ್ಲಿನ ವಿಭಕ್ತಿ ಪ್ರತ್ಯಯ :

(1) ಚತುರ್ಥಿ ವಿಭಕ್ತಿ (2) ಸಪ್ತಮಿ ವಿಭಕ್ತಿ (3) ಪಂಚಮಿ ವಿಭಕ್ತಿ (4) ಪ್ರಥಮ ವಿಭಕ್ತಿ

CAREERINDIA

**92.** ಮೊದಲು – ಪದದ ವಿರುದ್ಧಾರ್ಥಕ ಪದ :

(1) ಬದಲು (2) ಕೊನೆ (3) ಅದಲು (4) ಪ್ರಾರಂಭ

**93.** ಕುಲದ ಯಜಮಾನ ಯಾರು ?

(1) ಚಿನುಗ (2) ಹನುಮ (3) ರಂಗ (4) ಚಿಕ್ಕ

**94.** ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದುದಕ್ಕೆ ಕಾರಣವೇನು ?

(1) ಅಕ್ಕ ಪಕ್ಕದ ಮಕ್ಕಳು ಶಾಲೆಗೆ ಹೋಗುತ್ತಿದ್ದುದರಿಂದ

(2) ಮಕ್ಕಳ ಗಲಾಟೆ ತುಂಟತನ ತಡೆಯಲಾರದೆ

(3) ಪ್ರಾರ್ಥನೆ ಹಾಡಲು

(4) ಓದಿಕೊಳ್ಳಲು

**95.** ಶಾಲೆ ನಡೆಯುತ್ತಿದ್ದುದು ಎಲ್ಲಿ ?

(1) ಅರಳಿ ಕಟ್ಟೆಯ ಮೇಲೆ

(2) ಮರದಡಿಯಲ್ಲಿ

(3) ಅರಳಿ ಕಟ್ಟೆಯ ಮೇಲೆ ಮತ್ತು ಮರದಡಿಯಲ್ಲಿ ಇಲ್ಲ

(4) ಅರಳಿ ಕಟ್ಟೆಯ ಮೇಲೆ ಮತ್ತು ಮರದಡಿಯಲ್ಲಿ

**96.** 'ಕೂಕಣಕ್ಕಾಗಾಕ್ಕಿಲ್ಲ' – ಈ ಪದದ ಅರ್ಥ :

(1) ಕೆಳಗೆ ಇರಲು ಆಗಲ್ಲ (2) ಕಣದ ಹಿಂದೆ ಹೋಗಲು ಆಗಲ್ಲ

(3) ಕುಳಿತುಕೊಳ್ಳಲು ಆಗಲ್ಲ (4) ಕೂಗಿಕೊಳ್ಳಲು ಆಗಲ್ಲ

**97.** ಎರ್ಗೆ ಪದದ ಶಿಷ್ಟ ರೂಪ :

(1) ಪರರಿಗೆ (2) ಹೆರವರಿಗೆ (3) ಹೆರಿಗೆ (4) ನೋವು

**98.** ಅಕ್ಕ ಪಕ್ಕ ಪದವು :

(1) ವಿರುದ್ಧಾರ್ಥಕ ಪದ (2) ಜೋಡು ಪದ

(3) ಅನ್ಯದೇಶ್ಯ ಪದ (4) ಸಮಾನಾರ್ಥಕ ಪದ

**99.** ಹುಡುಗ್ರು ಸ್ಕೂಲಿಗೆ ಚಕ್ಕರ್ ಹೊಡೆಯಲು ಕಾರಣವೇನು ?

(1) ಹೊಟ್ಟೆ ನೋವು

(2) ತಲೆನೋವು

(3) ಮೇಷ್ಟ್ರ ಚಿಲುಪೆ ಕಡ್ಡಿಯ ಏಟಿನ ಹೆದರಿಕೆಯಿಂದ

(4) ಇರುವೆಗಳು ಕಚ್ಚಿದ್ದರಿಂದ

www.careerindia.com

CAREERINDIA

**ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100-105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಸ್ನಾನಘಟ್ಟದಲಿ ಸುಮ್ಮನೆ ಕುಳಿತು, ನದಿಯ ಜಲ ಕದಡಿಹುದು, ಇಲ್ಲಿ ಮಿಂದರೆ ಕೆಸರು ಮೈಗೆಲ್ಲ
ಅಮರಬಹುದೆಂದು ಬೆದರಿಸಿ ನಮ್ಮ ರಾಮಯ್ಯ ಕಥೆಗೆ ತಿರುಗಿದರು.
ನನಗೂ ನದಿಯ ನೀರಿಗೂ ಅಷ್ಟಷ್ಟೆ. ಹರಿದರೂ ನಿಂತಂತೆ ನೀರೆಲ್ಲ.
ಹತ್ತು ಜನ ಹರಿಗೋಲ ಹತ್ತಿ ಹೊಳೆ ದಾಟಿದರು;
ಹತ್ತಾರು ಜನ ಮಿಂದು ಕುಕ್ಕೂರ ಸೇರಿದರು,
ಉರಿ ಬಿಸಿಲು ಹಬ್ಬಿ ತೆರೆತೆರೆಗಳೆತ್ತರಗಳಲ್ಲಿ ವಜ್ರಗಳ ಹರಡಿ,
ನೀರಿನ ಓರೆಕೋರೆಯಲಿ ಗಿಣಿ ಹಸುರ ಸೊಂಪ ಹಾಸಿತ್ತು.
ಹೊಸ ನೀರಿನಲ್ಲಿ ಮರಿಮೀನು ಕೈಕಾಲುಬಂದ ಕುಸುಮಗಳಂತೆ ಹರಿದಾಡಿದವು, ಮಿನುಗಿ, ಮಾಯವಾಗಿ,

**100.** ತೆರೆ ತೆರೆಗಳೆತ್ತರಗಳಲ್ಲಿ – ಈ ಪದವನ್ನು ಬಿಡಿಸಿ ಬರೆಯಿರಿ :

(1) ತೆರೆ ತೆರೆಗಳ + ಎತ್ತರಗಳಲ್ಲಿ
(2) ತೆರೆ ತೆರೆ + ಗಳ + ಎತ್ತರಗಳಲ್ಲಿ
(3) ತೆರೆ + ತೆರೆಗಳ + ಎತ್ತರಗಳಲ್ಲಿ
(4) ತೆರೆ ತೆರೆಗಳೆ + ಎತ್ತರಗಳಲ್ಲಿ

**101.** ಇಬ್ಬರಿಗೂ ನದಿಯು ಕಂಡ ರೀತಿ :

(1) ತೆರೆಯೇಳುವ ನೀರು, ಮಿಂದೇಳುವ ನೀರು
(2) ತಿಳಿಯಾದ ನೀರು, ಹರಿಯುವ ನೀರು
(3) ಕದಡಿದ ನೀರು, ಹರಿಯುವ ನೀರು
(4) ಬಗ್ಗಡಗೊಂಡ ನೀರು, ನಿಂತ ನೀರು

**102.** 'ರಾಮಯ್ಯ ಕಥೆಗೆ ತಿರುಗಿದರು' – ಕವನ ಸಂದರ್ಭದಲ್ಲಿ ಈ ವಾಕ್ಯದ ಅರ್ಥ :

(1) ಮತ್ತೆ – ಮತ್ತೆ ಕಥೆಯನ್ನು ಹೇಳುವುದು
(2) ಕಥೆಯನ್ನು ಹೇಳುವುದು
(3) ಗಮನವನ್ನು ಬೇರೆಯ ಕಡೆಗೆ ತಿರುಗಿಸುವುದು
(4) ಕಥೆಯನ್ನು ತಿರುವು–ಮುರುವಾಗಿ ಹೇಳುವುದು

**103.** 'ಮಿಂದು' – ಈ ಪದದಲ್ಲಿನ ಧಾತು ಪದವನ್ನು ತಿಳಿಸಿ :

(1) ಮಿನ್ (2) ಮೀಯು (3) ಮೀಯಿಸು (4) ಮೀಂದ

**104.** 'ಅಮರು' – ಈ ಪದದ ಅರ್ಥ :

(1) ಆವರಿಸು (2) ಬಡಿದುಕೊಳ್ಳು (3) ಒತ್ತಿಕೊಳ್ಳು (4) ಹತ್ತಿಕೊಳ್ಳು

**105.** ಮರಿ ಮೀನನ್ನು ಇಲ್ಲಿ ಯಾವುದಕ್ಕೆ ಹೋಲಿಸಲಾಗಿದೆ ?

(1) ಹೂವಿಗೆ
(2) ಕೈ ಮತ್ತು ಕಾಲು ಹುಟ್ಟಿಕೊಂಡಿರುವ ಹೂಗಳಿಗೆ
(3) ಕೈ ಕಾಲು ಉಪಯೋಗಿಸುವ ಮರಿಗಳಿಗೆ
(4) ಹರಿದಾಡುವ ಮಾಯಾ ಕುಸುಮಗಳಂತೆ

www.careerindia.com

CAREERINDIA

106. ಮಾನವ ಭಾಷೆಯ ಈ ಮುಂದಿನ ಯಾವ ಲಕ್ಷಣಗಳಿಂದಾಗಿ ಮಾನವರು ತತ್‌ಕ್ಷಣದ ಸಮಯ ಮತ್ತು ಸ್ಥಳದಲ್ಲಿ ಇರದ ಯಾವ ವಿಷಯದ ಬಗ್ಗೆ ಮಾತನಾಡಬಲ್ಲರು ?

(1) ಸ್ಥಳ ಪಲ್ಲಟ (Displacement)

(2) ಸ್ವೇಚ್ಛಾನುಸಾರವಾಗಿ (Arbitrariness)

(3) ವಿನ್ಯಾಸ ಅವಲಂಬನೆ (Structure dependence)

(4) ವಿಚ್ಛಿನ್ನತೆ (Discreteness)

107. ಈ ಮುಂದಿನ ಕ್ರಶೇನನ (Krashen's) ಪ್ರಮೇಯಗಳಲ್ಲಿ (hypotheses) ಯಾವ ಪ್ರಮೇಯವು ವೈಗೋಟ್‌ಸ್ಕಿ (Vygotsky) ಪ್ರಮೇಯಕ್ಕೆ ಸಾದೃಶವಾಗಿದೆ ?

(1) ಇನ್‌ಪುಟ್ ಪ್ರಮೇಯ

(2) ಮೇಲ್ವಿಚಾರಣಾ (Monitor) ಪ್ರಮೇಯ

(3) ಸ್ವಾಭಾವಿಕ ಕ್ರಮದ ಪ್ರಮೇಯ

(4) ಪ್ರಭಾವಕಾರಿ ಶೋಧನಾ (Affective filter) ಪ್ರಮೇಯ

108. ಉತ್ಪಾದಕ ಸಾಮರ್ಥ್ಯದ ಶಬ್ದಕೋಶ (Productive vocabulary) ಎಂದರೇನು ?

(1) ಪದಗಳನ್ನು ನಾವು ಕೇಳುತ್ತಿದ್ದಂತೆ ಗುರುತಿಸುವುದು.

(2) ಸಾಲುಗಳನ್ನು ಮೀರಿ ನಾವು ಓದುತ್ತಿರುವಂತೆ ಪದಗಳನ್ನು ಗಮನಿಸುವುದು.

(3) ಬರವಣಿಗೆ ಮತ್ತು ಮಾತಿನಲ್ಲಿ ನಾವು ಬಳಸುವ ಪದಗಳು.

(4) ಓದುಗರಿಗೆ ಹೊಸದೆನ್ನಿಸುವ ಪದಗಳು.

109. ಈ ಮುಂದಿನವುಗಳಲ್ಲಿ ಯಾವುದು ದ್ವಿತೀಯ ಭಾಷಾ ಬೋಧನೆಯ ವ್ಯಾಕರಣ ಭಾಷಾಂತರ ವಿಧಾನವಲ್ಲ ?

(1) ಪ್ರಥಮ ಮತ್ತು ದ್ವಿತೀಯ ಭಾಷೆಯ ವ್ಯಾಕರಣ ನಿಯಮಗಳನ್ನು ಹೋಲಿಸಿ ನೋಡುವುದು.

(2) ದ್ವಿತೀಯ ಭಾಷೆಯ ವ್ಯಾಕರಣ ನಿಯಮಗಳನ್ನು ಕಲಿಯುವುದು ಮತ್ತು ಅಭ್ಯಾಸ ಮಾಡುವುದು.

(3) ದ್ವಿತೀಯ ಭಾಷೆಯಲ್ಲಿ ನೇರವಾಗಿ ಸಂವಹನ ಮಾಡುವುದು ಆಗ ಎರಡು ಭಾಷೆಗಳ ವ್ಯಾಕರಣ ನಿಯಮಗಳನ್ನು ಹೋಲಿಸುವುದು.

(4) ಭಾಷೆಯ ಕ್ರಿಯೆಗಿಂತ ರಚನೆಯ ಮೇಲೆ ಹೆಚ್ಚು ಗಮನ ಹರಿಸುವುದು.

110. ಒಬ್ಬ ಶಿಕ್ಷಕಿಯು ತಾನು ವಿದ್ಯಾರ್ಥಿಗಳಿಗೆ ನೀಡಿದ ಪ್ರಶ್ನೆಗೆ ಅವರು ಅನುಭವ ಆಧಾರದ ಮೇಲೆ ಹೇಗೆ ಉತ್ತರ ನೀಡಿದರು ಮತ್ತು ಅವರು ಆ ಉತ್ತರವನ್ನು ಬರೆದಾಗ ಅವರು ಏನನ್ನು ಚಿಂತಿಸಿದ್ದರು ಮತ್ತು ಹೇಗೆ ಯೋಚಿಸುತ್ತಿದ್ದರು ಎಂಬುದನ್ನು ತಿಳಿಸುವಂತೆ ವಿದ್ಯಾರ್ಥಿಗಳನ್ನು ಕೇಳಿದರು. ಇದು ಈ ಮುಂದಿನ ಕ್ರಿಯೆಗೆ ಉದಾಹರಣೆಯಾಗಿದೆ :

(1) ಮೆಟಾಕಾಗ್ನಿಷನ್ (Metacognition)

(2) ರೂಪಕ (Metaphor)

(3) ಮೆಟಾಲಿಂಗ್ವಲಿಸಂ (Metalingualism)

(4) ಮೆಟಾಸೆಮಿಯೋಟಿಕ್ಸ್ (Metasemiotics)

www.careerindia.com

CAREERINDIA

**111.** ಒಂದು ಭಾಷಾ ಸಮುದಾಯದಲ್ಲಿ 'ಎಸ್' ಎಂಬ ಪದವನ್ನು ಎರಡು ಬೇರೆ ಬೇರೆ ಸಾಮಾಜಿಕ–ಆರ್ಥಿಕ ಭಾಷಾ ಗುಂಪುಗಳಲ್ಲಿ ಭಿನ್ನಭಿನ್ನವಾಗಿ ಉಚ್ಚಾರ ಮಾಡುತ್ತಾರೆ. ಇದು ಈ ಮುಂದಿನ ಅಂಶಕ್ಕೆ ಉದಾಹರಣೆಯಾಗಿದೆ :

(1) ಸಾಮಾಜಿಕ ಭಾಷಾ ಶಾಸ್ತ್ರದ ಭಿನ್ನತೆ (Socio-linguistic variable)

(2) ವ್ಯಾವಹಾರಿಕ ಭಿನ್ನತೆ

(3) ಸಮಾಜೋ–ಸಾಂಸ್ಕೃತಿಕ ಭಿನ್ನತೆ

(4) ಸಮಾಜೋ–ಮನಶ್ಶಾಸ್ತ್ರೀಯ ಭಿನ್ನತೆ

**112.** ಮಾತೃಭಾಷೆ ಆಧಾರಿತ ಬಹುಭಾಷಿಕತನವನ್ನು ಈ ಮುಂದಿನ ಹೇಳಿಕೆ ಸಮರ್ಥಿಸುತ್ತದೆ :

(1) ಎಲ್ಲ ಮಕ್ಕಳು ತಮ್ಮ ಶಾಲಾಪ್ರವೇಶವನ್ನು ತಮ್ಮ ತಮ್ಮ ಮಾತೃಭಾಷೆ ಅಥವಾ ಮನೆಭಾಷೆಯೊಂದಿಗೆ ಪ್ರಾರಂಭಿಸಬೇಕು.

(2) ಎಲ್ಲ ಮಕ್ಕಳು ತಮ್ಮ ಶಾಲಾಪ್ರವೇಶವನ್ನು ತಮ್ಮ ರಾಜ್ಯಭಾಷೆಯಲ್ಲಿ ಪ್ರಾರಂಭಿಸಬೇಕು.

(3) ಎಲ್ಲ ಮಕ್ಕಳು ತಮ್ಮ ಶಾಲಾಪ್ರವೇಶವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ಮತ್ತು ಮನೆಭಾಷೆಯಲ್ಲಿ ಪ್ರಾರಂಭಿಸಬೇಕು.

(4) ಎಲ್ಲ ಮಕ್ಕಳು ತಮ್ಮ ಪ್ರಥಮ ಭಾಷೆಯಾಗಿ ಹಿಂದಿಯನ್ನು ಅಧ್ಯಯನ ಮಾಡಬೇಕು.

**113.** ಈ ಮುಂದಿನವುಗಳಲ್ಲಿ ಯಾವುದನ್ನು ಭಾಷಾರ್ಜನೆ ಸಾಧನದ (LAD) ಪರಿಕಲ್ಪನೆಯ ಮೂಲಕ ವಿವರಿಸಲಾಗುವುದಿಲ್ಲ ?

(1) ಮಕ್ಕಳು ಹೇಗೆ ತಮ್ಮ ಪ್ರಥಮ ಭಾಷೆಯನ್ನು ಕಲಿಯುತ್ತಾರೆ.

(2) ಮಕ್ಕಳು ಹೇಗೆ 4 - 5 ವರ್ಷಗಳ ಅಲ್ಪಾವಧಿಯಲ್ಲಿ ಭಾಷೆ ಕಲಿಯಲು ಸಮರ್ಥರಾಗುತ್ತಾರೆ.

(3) ಮಕ್ಕಳು ಸಾಂಕೇಕ ಭಾಷೆಯನ್ನು ಕಲಿಯಲು ಹೇಗೆ ಸಮರ್ಥರಾಗುತ್ತಾರೆ.

(4) ಮಕ್ಕಳ ಭಾಷಾ ಫಲಿತಗಳು (outputs) ಅವರು ಪಡೆದ ಮಾಹಿತಿ ಪರಿಕರಗಳಿಗಿಂತ (inputs) ಏಕೆ ಹೆಚ್ಚಾಗಿರುತ್ತದೆ.

**114.** ಭಾಷೆ ಮತ್ತು ಉಪ–ಭಾಷೆಗಳ ಬಗ್ಗೆ ಈ ಕೆಳಕಂಡವುಗಳಲ್ಲಿ ಭಾಷಿಕವಾಗಿ ಯಾವುದು **ಸರಿ** ?

(1) ಭಾಷೆಗಳಿಗೆ ಲಿಖಿತ ಸಾಹಿತ್ಯವಿದೆ. ಆದರೆ, ಉಪ–ಭಾಷೆಗಳು ಮೌಖಿಕ ಪರಂಪರೆಯನ್ನು ಮಾತ್ರ ಆಧರಿಸಿವೆ.

(2) ಭಾಷೆಗಳು ಮತ್ತು ಉಪ–ಭಾಷೆಗಳು ಭಾಷಿಕವಾಗಿ ಬೇರೆ ಬೇರೆ. ಆದರೆ, ಭೌಗೋಳಿಕವಾಗಿ ಒಂದೇ ಆಗಿವೆ.

(3) ಭಾಷೆಗಳಿಗೆ ತನ್ನದೇ ಆದ ಲಿಪಿಗಳಿವೆ (Scripts). ಆದರೆ, ಉಪ–ಭಾಷೆಗಳಿಗೆ ಸ್ವಂತ ಲಿಪಿ ಇಲ್ಲ.

(4) ಭಾಷೆ ಮತ್ತು ಉಪ–ಭಾಷೆಯ ನಡುವೆ ಚೆನ್ನಾಗಿ ವಿವರಿಸಲಾದ ಯಾವುದೇ ಭಾಷಿಕ ಭಿನ್ನತೆ ಇಲ್ಲ.

**115.** ಕುಮಿನ್‌ನ (Cummin's) ಅಂತರ ಅವಲಂಬನೆ ಪ್ರಮೇಯದ (Interdependence hypothesis) ಪ್ರಕಾರ ಈ ಕೆಳಕಂಡ ಯಾವುದು ಪರಸ್ಪರ ಅವಲಂಬಿತವಾಗಿದೆ ?

(1) ದ್ವಿತೀಯ ಭಾಷೆಯಲ್ಲಿ ಗ್ರಹಿಕಾಶಕ್ತಿ ಮತ್ತು ಫಲಿತಗಳು.

(2) ಪ್ರಥಮ ಮತ್ತು ದ್ವಿತೀಯ ಭಾಷೆಯಲ್ಲಿ ಜ್ಞಾನಗ್ರಹಣ ಶೈಕ್ಷಣಿಕ ಪ್ರಾವೀಣ್ಯತೆ.

(3) ದ್ವಿತೀಯ ಭಾಷೆಯಲ್ಲಿ ಓದುವುದು ಮತ್ತು ಬರೆಯುವುದು.

(4) ಪ್ರಥಮ ಮತ್ತು ದ್ವಿತೀಯ ಭಾಷೆಯಲ್ಲಿ ಮೂಲಭೂತ ವ್ಯಕ್ತಿಗಳ ನಡುವಿನ (Interpersonal) ಕೌಶಲ್ಯಗಳು.

www.careerindia.com

CAREERINDIA

**116.** ಈ ಮುಂದಿನವುಗಳಲ್ಲಿ ಯಾವುದು ಅಕ್ಷರಗಳು ಮತ್ತು ವರ್ಣಮಾಲೆಗೆ ಪ್ರತಿಯಾಗಿ ಪದಗಳು ಮತ್ತು ಸಣ್ಣ ಕತೆಗಳನ್ನು ಓದುವುದನ್ನು ಪ್ರಾರಂಭಿಸುವ ಓದಿನ ಕೌಶಲ್ಯವನ್ನು ಸಮರ್ಥಿಸುವುದಿಲ್ಲ ?

(1) ಪ್ರಾರಂಭದ ಓದುಗರು ಸಣ್ಣ ಸಣ್ಣ ಘಟಕಗಳಿಗಿಂತ ದೊಡ್ಡ ಘಟಕಗಳ ಮೇಲೆ ಉತ್ತಮವಾಗಿ ಗಮನ ಕ್ರೋಢೀಕರಿಸಬಲ್ಲರು.

(2) ಪದಗಳು ಮತ್ತು ಪಠ್ಯಗಳು ಅರ್ಥಪೂರ್ಣ ಸಂಬಂಧವನ್ನು ಸೃಷ್ಟಿಸುತ್ತವೆ. ಆದರೆ, ಅಕ್ಷರಗಳು ಹಾಗೆ ಮಾಡಲು ವಿಫಲವಾಗುತ್ತವೆ.

(3) ಪದಗಳು ಮತ್ತು ಪಠ್ಯಗಳು ತುಂಬಾ ಆಸಕ್ತಿದಾಯಕವಾಗಿರುತ್ತವೆ. ಆದರೆ ಅಕ್ಷರಗಳು ಹಾಗೆ ಇರುವುದಿಲ್ಲ.

(4) ಪದಗಳಿಗಿಂತ ಪ್ರತ್ಯೇಕ ಅಕ್ಷರಗಳನ್ನು ನೆನಪಿಟ್ಟುಕೊಳ್ಳುವುದು ತುಂಬಾ ಕಷ್ಟ.

**117.** ಗ್ರಹಿಕೆಯೊಂದಿಗೆ ಓದುವ ಸಂಕೇತವಾಗಿ ಈ ಕೆಳಕಂಡ ಯಾವ ಕೌಶಲ್ಯಗಳನ್ನು ಪರಿಗಣಿಸಲಾಗುವುದಿಲ್ಲ ?

(1) ಪ್ರತ್ಯೇಕ ಅಕ್ಷರಗಳು/ವರ್ಣಮಾಲೆಯ ಮೇಲೆ ಗಮನ ಹರಿಸುವುದು.

(2) ಮುಂಬರುವ ವಿಷಯವನ್ನು ನಿರೀಕ್ಷಿಸುವುದು.

(3) ಸಂಗತಿಗಳು ಅಥವಾ ಆಲೋಚನೆಗಳ ಅನುಕ್ರಮವನ್ನು ವ್ಯವಸ್ಥೆಗೊಳಿಸುವುದು ಮತ್ತು ನಿರ್ಧರಿಸುವುದು.

(4) ಈ ವರೆಗೆ ಓದಿದ ಪಠ್ಯವನ್ನು ಮನಸ್ಸಿನೊಳಗೆ ಸಂಕ್ಷಿಪ್ತಗೊಳಿಸಿಕೊಳ್ಳುವುದು.

**118.** ಮೀರ ಏಳು ತಿಂಗಳ ಶಿಶು. ಈಗ ಅವಳು ಸ್ವರಗಳು ಮತ್ತು ವ್ಯಂಜನಗಳನ್ನೆರಡನ್ನೂ ಒಳಗೊಂಡ ಶಬ್ದಗಳನ್ನು ಮಾಡುತ್ತಿದ್ದಾಳೆ. ಅವಳು ಈ ಕೆಳಕಂಡ ಯಾವ ಪ್ರಕಾರದ ಮೂಲಕ ಸಂವಹನ ಮಾಡಲು ಪ್ರಯತ್ನಿಸುತ್ತಿದ್ದಾಳೆ ?

(1) ಸ್ವನಿಮಾಗಳು (Phonemes) (2) ತೊದಲು ಮಾತು

(3) ಕೇಕೆ ಹಾಕುವುದು (4) ಭಾಷೆಯನ್ನೊಳಗೊಂಡ ಮಾತು

**119.** ಪಠ್ಯಗ್ರಹಣ ತಂತ್ರಗಳಿಗೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳಲ್ಲಿ ಸರಿಯಲ್ಲದ ಹೇಳಿಕೆಯನ್ನು ಗುರುತುಮಾಡಿ.

(1) ಮೇಲ್ಮಟ್ಟದ ಓದು (Skimming) ಪಠ್ಯವನ್ನು ತ್ವರಿತವಾಗಿ ಓದುವುದನ್ನು ಒಳಗೊಂಡಿದ್ದರೆ, ಕ್ಷಿಪ್ರ ಓದು (Scanning) ನಿರ್ದಿಷ್ಟ ವಿಷಯವನ್ನು ನೋಡುವುದನ್ನು ಒಳಗೊಳ್ಳುತ್ತದೆ.

(2) ಮೇಲ್ಮಟ್ಟದ ಓದು (Skimming) ಆಳ ಓದಾದರೆ, ಕ್ಷಿಪ್ರ ಓದು (Scanning) ಅವಸರದ ಓದಾಗಿದೆ.

(3) ಮೇಲ್ಪದರದ ಓದು ಪುನರಾವಲೋಕನಕ್ಕೆ ಹೆಚ್ಚು ಸೂಕ್ತವಾದರೆ, ಕ್ಷಿಪ್ರ ಓದು ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರ ನೀಡುವುದಕ್ಕೆ ಹೆಚ್ಚು ಸಹಾಯಕವಾಗುತ್ತದೆ.

(4) ಮೇಲ್ಪದರದ ಓದು ಮತ್ತು ಕ್ಷಿಪ್ರ ಓದಿನ ವಿಧಾನಗಳೆರಡೂ ಪಠ್ಯವನ್ನು ಓದಲು ಶೀಘ್ರ ಕಣ್‌ಚಲನೆಯನ್ನು ಒಳಗೊಂಡಿರುತ್ತದೆ.

**120.** ಮಕ್ಕಳು ತಮ್ಮ ಸುತ್ತಮುತ್ತಲಿನ ವಸ್ತುಗಳು, ಘಟನೆಗಳು, ವಿದ್ಯಮಾನಗಳ ಬಗ್ಗೆ ಪ್ರಶ್ನೆಗಳನ್ನು ಕೇಳಲಾರಂಭಿಸಿದಾಗ ಈ ಮುಂದಿನ ಯಾವ ಭಾಷಾ ಪ್ರಕಾರ್ಯವನ್ನು ಇತರೆಗಳಿಗಿಂತ ಹೆಚ್ಚಾಗಿ ಬಳಸಲಾಗಿದೆ ?

(1) ಕಲ್ಪನಾತ್ಮಕ (Imaginative) (2) ನಿಯಂತ್ರಕ (Regulatory)

(3) ಮಾಹಿತಿ ಪ್ರಧಾನ (Informative) (4) ಸ್ವಯಂ ಅನ್ವೇಷಣೆ (Heuristic)

www.careerindia.com

CAREERINDIA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 121-150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

www.careerindia.com

CAREERINDIA

## PART–V
## LANGUAGE-II
## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **121-150**) ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121-128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಕುಸುಮಾ ಬೇನ್ ಹಿರಿಯ ಸೊಸೆ, ಸಾಲೆಯಿಂದ ಬರುವ ತನ್ನ ಇಬ್ಬರು ಮಕ್ಕಳನ್ನೂ ನೆಗೆಣ್ಣಿಯ ಒಂದು ಮಗುವನ್ನೂ ಬಸ್ಸಿನಿಂದ ಇಳಿಸಿಕೊಳ್ಳಲು ನಿಲ್ದಾಣಕ್ಕೆ ಹೋಗುವ ಸರದಿ ಇವತ್ತು ಅವಳದ್ದಾಗಿತ್ತು. ಅತ್ತೆ–ನೆಗೆಣ್ಣಿಯರಿಗೆ ಹೇಳಿ ಮಾವನ ಜೊತೆಗೆ ಮನೆಯ ಹೊರಗೆ ಬಿದ್ದ ಕುಸುಮಾ ಬೇನ್ ಲಿಫ್ಟ್ ಹಿಡಿದು ತಳಮಜಲೆಯನ್ನು ತಲುಪಿದ ಮೇಲೆ ತಾನೇ ಮುಂದಾಗಿ ಡ್ಯೂಟಿಯ ಮೇಲಿದ್ದ ಚೌಕೀದಾರನನ್ನು ಮಾತನಾಡಿಸಿದಳು : ಊರಿಗೆ ಹೋದ ಚೌಕಿದಾರ ಮುಂಬಯಿಗೆ ಬಂದಿರುವನೆಂದೂ, ಎರಡನೆಯ ಪಾಳಿಗೆ ಬಂದರೆ ಇನ್ನು ಹದಿನೈದು ಇಪ್ಪತ್ತು ಮಿನಿಟುಗಳಲ್ಲಿ ಅವನು ಇಲ್ಲಿ ಹಾಜರಾಗಬೇಕೆಂದೂ ತಿಳಿಯಿತು. ಈಗ ಮಾತನಾಡಿದವನು ರಾವ್ ಜೀ ಭಾಯಿ ಈ ಮೊದಲು ಭೇಟಿಯಾದ ಚೌಕೀದಾರನಾಗಿರಲಿಲ್ಲ. ಮೂರನೆಯವನೇ ಆಗಿದ್ದ. ಆದರೆ ಅವನ ಬಗ್ಗೆ ಎಲ್ಲ ಗೊತ್ತಿದ್ದವನ ಹಾಗೆ–"ಅವನು ಬಂದರೆ ನಾನೇ ಅವನನ್ನು ಮೇಲೆ ಕಳಿಸುತ್ತೇನೆ. ಐದನೇ ಮಜಲಿನ ಮನೆಯಲ್ಲವೆ ?" ಎಂದು ಕೇಳಿದಾಗ "ಬೇಡ ನಾನೇ ಇಲ್ಲಿ ಕಾಯುತ್ತೇನೆ, ನಿನ್ನ ಜೊತೆಗೆ ಮಾತನಾಡುತ್ತ, ಆಗದೆ ?" ಎಂದು ಸಂಕೋಚದಿಂದ ಮೈ ಮುದುಡಿನಿಂತ ಹುಡುಗನ ಭುಜ ಚಪ್ಪರಿಸಿದ. ಆಮೇಲೆ ಸೊಸೆಯ ಕಡೆಗೆ ತಿರುಗಿ "ನೀನು ಹೋಗು ಮಗಳೇ, ನಾನು ಆಮೇಲೆ ಎಂಟನೇ ಮಜಲೆಯ ಗೆಳೆಯರನ್ನು ಮಾತನಾಡಿಸಿ ಹೊತ್ತು ಮುಳುಗುವ ಮೊದಲೇ ಮನೆಗೆ ಬರುತ್ತೇನೆ" ಎಂದು ಸೊಸೆಯನ್ನು ಬೀಳ್ಕೊಟ್ಟ.

ಇವೇ ರಾವ್ ಜೀ ಭಾಯಿ ತನ್ನ ಮನೆಯವರೊಡನೆ ಆಡಿದ, ಕೊನೆಯ ಮಾತುಗಳಾಗಿದ್ದವು. ಚೌಕೀದಾರನನ್ನು ಮಾತನಾಡಿಸಿಯಾದ ಮೇಲೆ ಎಂಟನೇ ಮಜಲೆಗೆ ಹೋಗುತ್ತೇನೆ ಎಂದವನು ಅಲ್ಲಿ ಹೋಗಿರಲೇ ಇಲ್ಲವೆಂದೂ ಗೊತ್ತಾದದ್ದು ತೀರ ತಡವಾಗಿ! ಆ ದಿನ ಸಂಜೆ, ಮುನ್ನಾ ದಿನವೇ ಮಾತನಾಡಿಕೊಂಡಂತೆ, ಆಫೀಸಿನಿಂದ ಹಿಂತಿರುಗಿ ಬರುವಾಗ ಸೋರಾಬನ ಜೊತೆಗೆ ಮ್ಯಾಕೆಲ್‌ನೂ ಇದ್ದ. ಇಬ್ಬರೂ ಕೂಡಿಯೇ ರಜೆ ಮುಗಿಸಿ ಡ್ಯೂಟಿ ಸೇರಿದ ಚೌಕೀದಾರನನ್ನೂ ಕಂಡು ತುಸು ಹೊತ್ತು ಬಿಟ್ಟು ಮೇಲೆ ಬರಬೇಕೆಂದು ಹೇಳಿ ಮೇಲೆ ಹೋದರು. ಚೌಕೀದಾರ ಬಂದಕೂಡಲೇ ಸೋರಾಬ ಒಂದು ತಿಂಗಳ ಹಿಂದೆ ಗೇಟಿನಲ್ಲಿ ಕಾಣಿಸಿಕೊಂಡ ಹುಡುಗನ ಬಗ್ಗೆ ಕೇಳಿದ. ತಾಸುಗಳ ಮೊದಲು, ಡ್ಯೂಟಿಗೆ ಹಾಜರಾದ ಕೆಲವು ನಿಮಿಷಗಳಲ್ಲೇ ತನ್ನನ್ನು ಕಂಡು ಪ್ರಶ್ನೆಗಳನ್ನೇ ಮಾತನಾಡಿಸಿದ ಅಪರಿಚಿತ ಮುದುಕನೊಬ್ಬ ಕೇಳಿದ್ದ, ಈಗ ಸೊಸೈಟಿಯ ಸೆಕ್ರೆಟರಿಯೂ ಕೇಳಿದಾಗ ಕಕ್ಕಾಬಿಕ್ಕಿಯಾದ ಚೌಕೀದಾರ ಹೇಳಿದ "ಅರಿಯದೇನೆ ನನ್ನ ಕೈಯಿಂದಾಗಿರಬಹುದಾದ ಗಲತಿ ಮಾಫು ಮಾಡಬೇಕು ಸಾಹೇಬ್. ಹುಡುಗ ಯಾರೆಂದು ನಿಜಕ್ಕೂ ನನಗೆ ತಿಳಿಯಲಿಲ್ಲ. ಮಧ್ಯಾಹ್ನ ಒಬ್ಬ ಮುದುಕ ಇದೇ ಹುಡುಗನ ಬಗ್ಗೆ ಕೇಳಿದರು. ಮಧ್ಯಾಹ್ನ ಮಾತನಾಡಿಸಿದ ಮುದುಕ ರಾವ್ ಜೀ ಭಾಯಿಯಿರಬೇಕೆಂದು ಊಹಿಸಲು ಸೋರಾಬ–ಮ್ಯಾಕೆಲ್‌ರಿಗೆ ಕಷ್ಟವಾಗಲಿಲ್ಲ. ಚೌಕೀದಾರ ಹೆದರಿ ನಡುಗುತ್ತಿದ್ದುದನ್ನು ಗಮನಿಸಿದ ಸೋರಾಬ ಅವನನ್ನು ಸಂತಯಿಸುವ ದನಿಯಲ್ಲಿ ಅವನ ಹೆಸರು ಕೇಳಿದ.

**121.** ಚೌಕೀದಾರ ಏಕೆ ಭಯಪಟ್ಟ ?

(1) ತಾನು ಹೊಸಬನಾದ್ದರಿಂದ ಜನ ನಂಬುವುದಿಲ್ಲವೆಂದು

(2) ಮಕ್ಕಳು ಬರಲಿಲ್ಲವೆಂಬ ಆತಂಕದಲ್ಲಿ

(3) ತಾನು ಜವಾಬ್ದಾರಿಯನ್ನು ನಿರ್ವಹಿಸಲಿಲ್ಲವೆಂದು

(4) ಅಪಾರ್ಟ್‌ಮೆಂಟಿನವರು ಬಯ್ಯುತ್ತಾರೆಂದು

www.careerindia.com

**122.** **'ಚೌಕೀದಾರ್'** ಪದವು ಯಾವ ಮೂಲದ್ದು ?

(1) ಉರ್ದು (2) ಸಂಸ್ಕೃತ (3) ಹಿಂದೂಸ್ಥಾನಿ (4) ಮರಾಠಿ

**123.** ಹೊಸ ಚೌಕೀದಾರನನ್ನು ಅಪಾರ್ಟ್‌ಮೆಂಟಿನವರು ಏನು ವಿಚಾರಿಸಿದರು ?

(1) ಒಂದು ತಿಂಗಳ ಹಿಂದೆ ಗೇಟಿನ ಹತ್ತಿರ ಕಾಣಿಸಿಕೊಂಡ ಹುಡುಗನನ್ನು

(2) ಆಗಂತುಕ ವ್ಯಕ್ತಿಯ ಬಗ್ಗೆ

(3) ರಾವ್ ಜೀ ಭಾಯಿಯ ಬಗ್ಗೆ

(4) ಕಳೆದುಹೋದ ವ್ಯಕ್ತಿಯ ಬಗ್ಗೆ

**124.** **'ಕುಸುಮಾ ಬೇನ್'** ಪದಗಳಲ್ಲಿ ಬೇನ್ ಏನನ್ನು ಸೂಚಿಸುತ್ತದೆ ?

(1) ಅಕ್ಕ (2) ಬೆನ್ನು (3) ತಂಗಿ (4) ಅಕ್ಕ ಅಥವಾ ತಂಗಿ

**125.** **'ನೆಗೆಣ್ಣಿ'** – ಪದದ ಅರ್ಥ :

(1) ಗಂಡನ ತಂಗಿ (2) ಅಣ್ಣನ ಮಗಳು (3) ಓರಗಿತ್ತಿ (4) ಅತ್ತೆ

**126.** **'ಮುನ್ನಾದಿನ'** – ಈ ವಾಕ್ಯಾಂಶದ ಅರ್ಥ :

(1) ಮೊದಲನೆಯ ದಿನ (2) ಈ ದಿನ

(3) ನಾಳೆಯ ದಿನ (4) ಹಿಂದಿನ ದಿನ

**127.** **'ಪ್ರಶ್ನೆಗಳನ್ನು'** – ಈ ಪದದಲ್ಲಿನ ವಿಭಕ್ತಿ :

(1) ಚತುರ್ಥಿ (2) ಪ್ರಥಮಾ (3) ತೃತೀಯಾ (4) ದ್ವಿತಿಯಾ

**128.** ಮಗಳನ್ನು ಶಾಲೆಯಿಂದ ಕುಸುಮಾ ಬೇನ್ ಏಕೆ ಕರೆತರಲಿಲ್ಲ ?

(1) ಮಕ್ಕಳು ಬರುವುದು ತಡವಾಯಿತು.

(2) ಚೌಕೀದಾರನು ಮೇಲೆ ಕರೆತರಲು ಒಪ್ಪಿದ.

(3) ರಾವ್ ಜೀ ಭಾಯಿ ತಾನು ಅವರನ್ನು ಕಳಿಸುತ್ತೇನೆ ಎಂದು ಹೇಳಿದ.

(4) ಮಾವನೇ ಕರೆತರುತ್ತೇನೆ ಎಂದು ಹೇಳಿದ.

www.careerindia.com

CAREERINDIA

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129-135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯದ ಮೊದಲ ಅರ್ಧದ ಆರಂಭವನ್ನು ಅರುಣೋದಯವೆಂದೂ ನಂತರದ ಅವಧಿಯನ್ನು ನವೋದಯವೆಂದೂ ಕರೆಯುವುದು ವಾಡಿಕೆ; ಮುಖ್ಯವಾಗಿ ಕವಿತೆಗೆ ಸಂಬಂಧಿಸಿ ಈ ಪದಗಳನ್ನು ಬಳಸಲಾಗುತ್ತಿದೆ. ಕೆಲವರು ಅರುಣೋದಯ ಮತ್ತು ನವೋದಯ ಎರಡನ್ನೂ ಒಟ್ಟಾಗಿ ನವೋದಯ ಎಂದು ಕರೆಯುತ್ತಾರೆ. ಹೀಗೆ ಒಟ್ಟಾಗಿ ಪರಿಭಾವಿಸಿದರೆ, ನನಗನಿಸುವುದು ನವೋದಯವನ್ನು ತುಸು ಕೆಳ ದೃಷ್ಟಿಯಿಂದ ಕಂಡ ಆಧುನಿಕರು ಆ ಅವಧಿಯ ಸಾಹಿತ್ಯವನ್ನು ಹೆಚ್ಚು ಆಸಕ್ತಿಯಿಂದ ಕಾಣುವುದು ಅಗತ್ಯ ಎಂಬುದಾಗಿ. ಇಲ್ಲಿ ಕೂಡ ಗದ್ಯ ಸಾಹಿತ್ಯ ಸಾಕಷ್ಟು ಅಧ್ಯಯನಕ್ಕೆ ಒಳಗಾಗಿದೆ; ಉದಾಹರಣೆಗೆ ಕನ್ನಡದ ಮೊದಲ ಕಾದಂಬರಿಗಳ ಬಗ್ಗೆ ವಿಪುಲವಾದ ಅಧ್ಯಯನಗಳು ನಡೆದಿವೆ, ನಡೆಯುತ್ತಲೂ ಇವೆ. ವಿಶ್ವವಿದ್ಯಾಲಯಗಳ ಸಂಶೋಧನ ವಿದ್ಯಾರ್ಥಿಗಳಿಗೆ ನವೋದಯ ಗದ್ಯ ಸಾಹಿತ್ಯ (ಮುಖ್ಯವಾಗಿ ಕಾದಂಬರಿಗಳು) ಸಾಕಷ್ಟು ಆಹಾರ ಒದಗಿಸಿವೆ. ಆದರೆ ಈ ಗಮನದ ಕಾಲು ಪಾಲು ಸಹಾ ಕಾವ್ಯಕ್ಕೆ ಸಿಕ್ಕಿಲ್ಲ. ಮುದ್ದಣನ "ರಾಮಾಶ್ವಮೇಧಂ" ಅಧ್ಯಯನಕ್ಕೆ ಒಳಗಾಗಿರುವುದು ನಿಜ; ಆದರೆ ಅದು ಹೊಸ ಕಾಲದ ಕನ್ನಡಿಗನೊಬ್ಬನ ಹಳೆಗನ್ನಡ ಕಾವ್ಯವೆಂಬ ಕಾರಣಕ್ಕೆ ಹಾಗಾಯಿತು. ಉಳಿದಂತೆ ನವೋದಯ ಕಾಲದ ಕಾವ್ಯ ಕ್ಷೇತ್ರದ ಮಹತ್ತರ ಕೊಡುಗೆಯಾದ ಕವಿತೆಗಳು ಅಷ್ಟೊಂದು ವಿಶ್ಲೇಷಣೆಗೆ ಒಳಪಡಲಿಲ್ಲ; ಹಾಗೆ ಒಂದು ವೇಳೆ ಒಳಪಟ್ಟಿದ್ದರೆ ಅದು ಕನ್ನಡ ರಾಷ್ಟ್ರೀಯತೆಯ ಅಥವಾ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅಭಿವ್ಯಕ್ತಿಯಾಗಿಯಷ್ಟೆ. ಈ ಆಯಾಮಗಳು ಅವಕ್ಕೆ ಮುಖ್ಯವಾಗಿದ್ದವು ಎನ್ನುವುದರಲ್ಲಿ ಸಂದೇಹವಿಲ್ಲ; ಆದರೂ ಅವು ಕೇವಲ ಸಂಗ್ರಾಮ ಗೀತೆಗಳಷ್ಟೇ ಆಗಿರಲಿಲ್ಲ. ಕನ್ನಡದ ಸೊಗಡನ್ನು ಕಾಪಾಡುವ ಹಾಗೂ ಮುಂದಿನ ಆಧುನಿಕ ಕವಿತೆಗೆ ಒಂದು ಸೇತುವಾಗುವ ಕೆಲಸವನ್ನು ಅವು ಮಾಡಿದವು. ಈ ಸೂಕ್ಷ್ಮತೆಯ ಕಾರಣಕ್ಕೆ ಆಧುನಿಕರು ನವೋದಯಕ್ಕೆ ಕೃತಜ್ಞರಾಗಿರುವುದು ಅವಶ್ಯ.

ನವೋದಯದ ಕವಿಗಳಲ್ಲಿ ಬಿ. ಎಂ. ಶ್ರೀ. ಯವರ ಜೊತೆಗೆ ಕೇಳಿಬರುವ ಇನ್ನೊಂದು ಪ್ರಸಿದ್ಧ ಹೆಸರು ದಕ್ಷಿಣ ಕನ್ನಡದ ಪಂಜೆ ಮಂಗೇಶರಾಯರದು (1874–1937). ಶ್ರೀಯವರಾಗಲಿ ಪಂಜೆಯವರಾಗಲಿ ಪೂರ್ಣಕಾಲಿಕ ಕವಿಗಳೂ ಆಗಿರಲಿಲ್ಲ. ಅವರು ಶಿಕ್ಷಣತಜ್ಞರು, ಗದ್ಯಲೇಖಕರು, ಸಾಂಸ್ಕೃತಿಕ ಪ್ರಚಾರಕರು ಎಲ್ಲವೂ ಆಗಿದ್ದರು. ಕವಿತೆ ಅವರ ಮಟ್ಟಿಗೆ ಈ ಒಟ್ಟಾರೆತನದ ಒಂದು ಭಾಗ, ಬಹುಶ: ಬಹು ಮುಖ್ಯವಾದ ಭಾಗ. ಇದು ಇಡೀ ನವೋದಯ ಕಾಲದ ಸಾಹಿತಿಗಳ ವ್ಯಕ್ತಿತ್ವವೆನ್ನಬಹುದು; ಇಂಗ್ಲಿಷ್‌ನಲ್ಲಿ ನಾವು ರಿನೇಸೆನ್ಸ್ ಪರ್ಸನಾಲಿಟಿ ಎಂದು ಕರೆಯುವಂಥದು. ಪಂಜೆಯವರ ಸಮಗ್ರ ಕವಿತೆಗಳು ಒಂದು ಚಿಕ್ಕ ಸಂಪುಟದಲ್ಲಿ ಅಡಕವಾಗುತ್ತವೆ.

ಇಲ್ಲಿ ನಾವು ಕಾಣುವುದು ಸರಳತನ; ಅಚ್ಚರಿಹುಟ್ಟಿಸುವ, ಆದರೆ ತಬ್ಬಿಬ್ಬಾಗಿಸದ ರೂಪಕಗಳು, ಪದಮಾಧುರ್ಯ, ಪ್ರಾಸ, ಛಂದೋಬದ್ಧತೆ, ಒಟ್ಟಾರೆಯಾಗಿ ಸುಭಗತೆ. ಅರ್ಥದ ವಿಷಯವಾಗಿ ಹೇಳುವುದಾದರೆ, ಏನಾದರೊಂದು ನೀತಿ ಇದ್ದೇ ಇರುತ್ತದೆ. ಪಂಜೆಯವರ ಪದ್ಯಗಳಲ್ಲೂ ನಾವು ಇದನೆಲ್ಲ ಕಾಣಬಹುದು. ಆದ್ದರಿಂದ ಕೆಲವೊಮ್ಮೆ ನವೋದಯದ ರಚನೆಗಳಲ್ಲಿ ಕವಿ ಕಾಣಿಸದಿರುವುದು ಮಾತ್ರವೇ ಅಲ್ಲ, ಕವಿಯ 'ಛಾಪು' ಕೂಡ ಇದೆ ಎಂದು ಹೇಳಲು ಬರುವುದಿಲ್ಲ. ಕವಿತೆ ಮುಖ್ಯ ಹೊರತು ಕವಿಯಲ್ಲ ಎನ್ನುವ ತತ್ವವನ್ನು ನಾವಿಲ್ಲಿ ಕಾಣುತ್ತೇವೆ. ಇದಕ್ಕೆ ಸರಿಯಾಗಿ, ಪಂಜೆಯವರಾದರೆ ತಮ್ಮ ಪದ್ಯಗಳ ಕೆಳಗೆ ತಮ್ಮ ಹೆಸರು ಹಾಕಲು ಕೂಡ ಇಷ್ಟಪಡುತ್ತಿರಲಿಲ್ಲ. 'ಕವಿಶಿಷ್ಯ' ಎಂಬ ಕಾವ್ಯನಾಮವನ್ನು ಅವರು ಕೆಲವು ಸಲ ಬಳಸಿದ್ದುಂಟು.

**129.** "ನಾನು" ಅನ್ನುವುದು :

(1) ಪ್ರಥಮ ಪುರುಷ (2) ಮಧ್ಯಮ ಪುರುಷ (3) ಉತ್ತಮ ಪುರುಷ (4) ತೃತಿಯ ಪುರುಷ

**130.** ಈ ಲೇಖಕರ ಪ್ರಕಾರ ಕಾದಂಬರಿ ಪ್ರಕಾರದ ಅಧ್ಯಯನವು ಸೇರುವುದು :

(1) ಅರುಣೋದಯ ಕಾಲಕ್ಕೆ

(2) ನವೋದಯ ಕಾಲಕ್ಕೆ

(3) ಅರುಣೋದಯ ಮತ್ತು ನವೋದಯ ಕಾಲಕ್ಕೆ

(4) ಎಲ್ಲಾ ಕಾಲಕ್ಕೂ

www.careerindia.com

CAREERINDIA

**131.** ಈ ಲೇಖನದ ದೃಷ್ಟಿಯಲ್ಲಿ ನವೋದಯ ಕವನಗಳಲ್ಲಿ ಕಂಡುಬರುವ ಲಕ್ಷಣ :

(1) ನೀತಿ (2) ವ್ಯಕ್ತಿನಿಷ್ಠತೆ (3) ಅಲಂಕಾರ (4) ಸಂಕೇತ

**132.** **'**ಇವು ಕೇವಲ ವಿವರಣೆಯೂ ಅಲ್ಲ**'** ಈ ವಾಕ್ಯವು :

(1) ಪ್ರಶ್ನಾರ್ಥಕ ವಾಕ್ಯ (2) ನಿಷೇಧಾರ್ಥಕ ವಾಕ್ಯ

(3) ಸಂಭವನಾರ್ಥಕ ವಾಕ್ಯ (4) ಸಂಕೀರ್ಣ ವಾಕ್ಯ

**133.** ಪಂಜೆಯವರ ಕಾವ್ಯನಾಮ :

(1) ಅಂಬಿಕಾತನಯದತ್ತ (2) ಕವಿಶಿಷ್ಯ (3) ಕುವೆಂಪು (4) ಆನಂದಕಂದ

**134.** **'**ಕವಿಯ ಛಾಪು**'** ಅಂದರೆ :

(1) ಕವಿಯ ಭಾಷೆ (2) ಕವಿಯ ಛಂದಸ್ಸು (3) ಕವಿಯ ಪ್ರಧಾನ (4) ಕವಿಯ ವಸ್ತು

**135.** ರಾಮಾಶ್ವಮೇಧವು ಈ ಕಾಲಘಟ್ಟದ ಕೃತಿ :

(1) ಹೊಸ ಕಾಲಘಟ್ಟ (2) ಸ್ವಾತಂತ್ರ್ಯ ಸಂಗ್ರಾಮ

(3) ಅರುಣೋದಯ (4) ನವೋದಯ

**136.** ಈ ಮುಂದಿನವುಗಳಲ್ಲಿ ಯಾವುದು ಸಂವಹನ ವಿಧಾನದ ಲಕ್ಷಣಗಳಲ್ಲ ?

(1) ಕ್ರಿಯೆಗಿಂತ ರಚನೆಯ ಮೇಲೆ ಹೆಚ್ಚು ಗಮನ ನೀಡುವುದು.

(2) ಭಾಷೆಯನ್ನು ಪರಿಕಲ್ಪನಾತ್ಮಕವಾಗಿ (Contextualised) ಬಳಸುವುದು.

(3) ಸ್ಪಷ್ಟವಾಗಿ ಪಾಠ ಮಾಡುವುದಕ್ಕೆ ಬದಲಾಗಿ ವ್ಯಾಕರಣದ ನಿಯಮಗಳನ್ನು ಹುಡುಕುವುದು.

(4) ಸಂವಹನಾತ್ಮಕ ಕ್ಷಮತೆಯನ್ನು ವೃದ್ಧಿಸುವುದು.

**137.** **'**ಪಿ**'**ಯನ್ನು **'**ಬಿ**'** ಎಂದು ಅಥವಾ '6' ನ್ನು '9' ಎಂದು ಓದುವುದು ಈ ಕೆಳಕಂಡ ಸಮಸ್ಯೆಯಿರುವ ಮಕ್ಕಳಲ್ಲಿ ಕಂಡುಬರುವ ಸಾಮಾನ್ಯ ತಪ್ಪುಗಳಾಗಿರುತ್ತವೆ. ಅವೆಂದರೆ :

(1) ಉಗ್ಗುವುದು (Stuttering)

(2) ಮಾತು ನಿಂತುಹೋಗಿರುವುದು (Aphasia)

(3) ಅನೋಮಿಯ (Anomia)

(4) ಪದಾಂಧತೆ (Dyslexia)

www.careerindia.com

138. ಈ ಮುಂದಿನವುಗಳಲ್ಲಿ ಯಾವುದು ರಚನಾತ್ಮಕ ಮೌಲ್ಯಮಾಪನದ ಉದಾಹರಣೆಯಲ್ಲ ?

(1) ಸೆಷನ್‌ನ ವರ್ಷದುದ್ದಕ್ಕೂ ಮೌಖಿಕ ಮತ್ತು ಬರವಣಿಗೆಯ ಚಟುವಟಿಕೆಗಳು, ಪಾತ್ರನಿರ್ವಹಣೆ ಇತ್ಯಾದಿಗಳ ಸರಣಿ.

(2) ಸೆಷನ್‌ನ ಕೊನೆಯಲ್ಲಿ ಸಾವಧಿ ಪ್ರಬಂಧ ಬರೆಸುವುದು (term-paper)

(3) ಕಾಲಾವಧಿಯಲ್ಲಿ ಆಗಾಗ ಗ್ರಹಿಕೆಯ ಬಗ್ಗೆ ಲಿಖಿತ ಪರೀಕ್ಷೆ ಮತ್ತು ಇತರ ಚಟುವಟಿಕೆಗಳನ್ನು ಸಂಯೋಜಿಸುವುದು.

(4) ಸೆಷನ್ ಅವಧಿಯುದ್ದಕ್ಕೂ ಕಿರು ಪರೀಕ್ಷೆಗಳಿಂದ ಹಿಡಿದು ಸಹಾಧ್ಯಾಯಿಗಳಿಂದ (peer) ಮೌಲ್ಯಮಾಪನ ಮಾಡಿಸುವವರೆಗೆ ಮೌಲ್ಯಮಾಪನ ತಂತ್ರಗಳನ್ನು ರೂಪಿಸುವುದು.

139. ಮೂಲಭೂತ ವ್ಯಕ್ತಿಗಳ ನಡುವಿನ ಕೌಶಲ್ಯವನ್ನು __________ ಎನ್ನುತ್ತಾರೆ.

(1) ಉನ್ನತ ಮಟ್ಟದ ಭಾಷಾ ಕೌಶಲ್ಯಗಳು

(2) ಅಮೂರ್ತ ಭಾಷೆ

(3) ದೈನಂದಿನ ಸಂವಹನಕ್ಕೆ ಬಳಸುವ ಭಾಷೆ

(4) ಅಂತರ್ ಭಾಷೆ

140. ಪಠ್ಯದ ಗ್ರಹಿಕೆ ಮತ್ತು ಶಬ್ದಭಂಡಾರವನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಯಾವ ಸಂಗತಿಗಳು ಸಹಾಯಕ–ವಾಗುವುದಿಲ್ಲ ?

(1) ಪದನಕ್ಷೆ (Word-map)

(2) ವರ್ಣಮಾಲೆ ಚಾರ್ಟ್ (Alphabet chart)

(3) ನಿರ್ದಿಷ್ಟ ವಿಷಯದ ನಕಾಸೆಗಳು (Theme-map)

(4) ಸಚಿತ್ರ ನಿಘಂಟುಗಳು (Picture dictionaries)

141. ಎರಡು ಮುಖ್ಯ ಮೌಲ್ಯಮಾಪನಗಳಿಗೆ ಸಂಬಂಧಿಸಿದಂತೆ ಈ ಹೇಳಿಕೆಗಳಲ್ಲಿ ಯಾವುದು ಸರಿ ?

(1) ರಚನಾತ್ಮಕ ಮೌಲ್ಯಮಾಪನವು ಕಲಿಕೆಯ ಕ್ರಿಯೆಗಿಂತ ರಚನೆಯ ಮೇಲೆ ಗಮನ ಕೇಂದ್ರೀಕರಿಸುತ್ತದೆ.

(2) ಸಂಕ್ಷಿಪ್ತಾತ್ಮಕ (Summative) ಮೌಲ್ಯಮಾಪನವು ವರ್ಷದುದ್ದಕ್ಕೂ ನಡೆಸಿದ ಪ್ರತಿಯೊಂದು ಬಗೆಯ ಮೌಲ್ಯಮಾಪನದ ಒಟ್ಟು ಸಾರವಾಗಿದೆ.

(3) ರಚನಾತ್ಮಕ ಮೌಲ್ಯಮಾಪನವು ಕಲಿಕೆ ಹಂತದ ಮೂಲಕ ನಿರಂತರವಾಗಿ ಸಾಗುತ್ತದೆ.

(4) ಸಂಕ್ಷಿಪ್ತಾತ್ಮಕ ಮೌಲ್ಯಮಾಪನವನ್ನು ಕಲಿಕಾ ಹಂತಕ್ಕೆ ಮೊದಲು ಮತ್ತು ಕಲಿಕಾ ಹಂತದ ಅವಧಿಯಲ್ಲಿ ಮಾಡಲಾಗುತ್ತದೆ.

142. ಆರಂಭದ ಕಲಿಕೆದಾರರು, ನಿರ್ದಿಷ್ಟ ಪಠ್ಯ ವಿಷಯವನ್ನು ಅರಿಯಲು ಪಠ್ಯದ ವಿಷಯ, ಸಾಂಸ್ಕೃತಿಕ ಅಂಶಗಳ ಬಗ್ಗೆ ಅವನ/ಅವಳ ಸಾಮಾನ್ಯ ಜ್ಞಾನವನ್ನು ಬಳಸಿದಾಗ, ಈ ವಿಧಾನವನ್ನು ಹೀಗೆಂದು ಕರೆಯುತ್ತಾರೆ ?

(1) ಟಾಪ್–ಡೌನ್ ಅಪ್ರೋಚ್ (2) ಟಾಪ್–ಅಪ್ ಅಪ್ರೋಚ್

(3) ಬಾಟಮ್–ಅಪ್ ಅಪ್ರೋಚ್ (4) ಬಾಟಮ್–ಡೌನ್ ಅಪ್ರೋಚ್

www.careerindia.com

CAREERINDIA

**143.** ಹಿಂದಿ ಮಾತನಾಡುವ ವಿದ್ಯಾರ್ಥಿಗಳಿಗೆ ದ್ವಿತೀಯ ಭಾಷೆಯಾಗಿ ಇಂಗ್ಲಿಷ್ ಭಾಷೆಯನ್ನು ಬೋಧಿಸುವ ಶಿಕ್ಷಕಿಯು, ಅವರಿಗೆ ವ್ಯಾಕರಣದ ಸ್ಪಷ್ಟ ನಿಯಮಗಳನ್ನು ತಿಳಿಸದೆ ಇಂಗ್ಲಿಷ್‌ನಲ್ಲಿ ಸಣ್ಣ ಸಣ್ಣ ಸಂಭಾಷಣೆಗಳಲ್ಲಿ ಅವರು ತೊಡಗುವಂತೆ ಸಂದರ್ಭಗಳನ್ನು ಮತ್ತು ಅವಕಾಶಗಳನ್ನು ನೀಡುತ್ತಾಳೆ. ಅವರು ತಮ್ಮ ಸಂಭಾಷಣೆಯಲ್ಲಿ ಬಳಸುವ ಉದಾಹರಣೆಗಳನ್ನು ಅವರ ಮುಂದೆ ಹೇಳುತ್ತಾಳೆ. ಕ್ರಮೇಣ ವಿದ್ಯಾರ್ಥಿಗಳು ಶಿಕ್ಷಕಿಯ ಸಹಾಯದಿಂದ ತಾವೇ ನಿಯಮಗಳನ್ನು ಕಲಿಯುತ್ತಾರೆ. ಶಿಕ್ಷಕಿಯು ಅನುಸರಿಸಿದ ಮಾದರಿ/ವಿಧಾನ ಯಾವುದೆಂದು ನೀವು ಭಾವಿಸುವಿರಿ ?

(1) ವ್ಯಾಕರಣ–ಭಾಷಾಂತರ ವಿಧಾನ

(2) ಕೇಳಿಸುವ ಮೂಲಕ ಭಾಷೆಯನ್ನು ಕಲಿಸುವ ವಿಧಾನ

(3) ಸಂವಹನಾತ್ಮಕ ವಿಧಾನ

(4) ನೇರ ವಿಧಾನ

**144.** ಕಲಿಕೆಯಲ್ಲಿನ ಕೊರತೆಗಳನ್ನು ಗಮನಿಸಲು ತಪ್ಪುಗಳ ವಿಶ್ಲೇಷಣೆ ತುಂಬಾ ಮುಖ್ಯ. ಏಕೆಂದರೆ :

(1) ಬಹುತೇಕ ತಪ್ಪುಗಳು ಕಲಿಯುವವರ ಕಠಿಣ ಧೋರಣೆಯಿಂದ ಉಂಟಾಗುತ್ತವೆ.

(2) ತಪ್ಪುಗಳು ಕಲಿಯುವವರ ಮನಸ್ಸನ್ನು ಮತ್ತು ಅವರ ಕಲಿಕಾ ಹಂತವನ್ನು ತಿಳಿಯಲು ನೆರವಾಗುವಂತಹ ಮಾರ್ಗಗಳು.

(3) ತಪ್ಪುಗಳು ಕಲಿಯುವವರು ಅರ್ಥಮಾಡಿಕೊಂಡಿರುವ ವಿಧಾನದಲ್ಲಿನ ಕೊರತೆಯನ್ನು ಸೂಚಿಸುತ್ತವೆ.

(4) ತಪ್ಪುಗಳು ಪರಿಕಲ್ಪನೆಗಳ ಬೆಳವಣಿಗೆ ಮತ್ತು ಉತ್ತೇಜನವನ್ನು ತೋರಿಸುತ್ತವೆ.

**145.** ಈ ಕೆಳಗಿನವುಗಳಲ್ಲಿ ಯಾವುದು ಮೌಲ್ಯಮಾಪನದ ಬಗ್ಗೆ ಸರಿಯಲ್ಲ ?

(1) ಇದು ವಿದ್ಯಾರ್ಥಿಯ ಪ್ರಗತಿಯ ಬಗ್ಗೆ ಸಮಗ್ರ ಚಿತ್ರಣವನ್ನು ನೀಡುತ್ತದೆ.

(2) ಇದು ವಿದ್ಯಾರ್ಥಿಯ ಕಾರ್ಯಕ್ಷಮತೆಯ ಬಗ್ಗೆ ಸ್ಪಷ್ಟ ಸಾಕ್ಷಿಯನ್ನು ಒದಗಿಸುತ್ತದೆ.

(3) ಇದು ವಿದ್ಯಾರ್ಥಿಯ ಪ್ರಗತಿಯ ಮಟ್ಟವನ್ನು ಮೌಲ್ಯಮಾಪನ ಮಾಡಲು ಸಹಾಯವಾಗುತ್ತದೆ.

(4) ಇದನ್ನು ಶಿಕ್ಷಕರು ಮಾತ್ರ ಮಾಡಬಹುದು.

**146.** ಈ ಕೆಳಕಂಡ ಯಾವುದು ಅಂತರ್ವಿಷ್ಟ (inclusive) ತರಗತಿಯನ್ನು ಸೃಜಿಸಲು ಸಹಾಯಕವಾಗುವುದಿಲ್ಲ ?

(1) ಸಹಾಧ್ಯಾಯಿಗಳು (Peer) ಸಂವಹನ ಮತ್ತು ಪ್ರತಿಕ್ರಿಯಾತ್ಮಕ ಮಾಹಿತಿಯನ್ನು ನೀಡುವ ವ್ಯವಸ್ಥೆ.

(2) ಗುಂಪು ಚಟುವಟಿಕೆಗಳನ್ನು ನೀಡುವುದು.

(3) ಬಹುಭಾಷಿಕ ಪ್ರಸ್ತಾವನೆಯನ್ನು ಅಳವಡಿಸಿಕೊಳ್ಳುವುದು.

(4) ಕೆಲವು ವಿದ್ಯಾರ್ಥಿಗಳು ತರಗತಿಯಲ್ಲಿ ಮೇಲ್ವಿಚಾರಕರಾಗಿ (monitor) ಇರುವುದು.

**147.** ಮಕ್ಕಳ ಸಾಹಿತ್ಯದ ವಿಷಯದಲ್ಲಿ ಈ ಕೆಳಕಂಡ ಯಾವ ಅಂಶವು ಅಪೇಕ್ಷಣೀಯವಲ್ಲ ?

(1) ಪ್ರಾಣಿಗಳ ಪಾತ್ರಗಳು

(2) ಸ್ಪಷ್ಟ ನೈತಿಕ ಮೌಲ್ಯಗಳು

(3) ದಪ್ಪಕ್ಷರಗಳು ಮತ್ತು ತಿಳಿದಿರುವ ಪದಗಳು

(4) ಆಕರ್ಷಕ ಚಿತ್ರಗಳು

www.careerindia.com

CAREERINDIA

**148.** ಈ ಮುಂದಿನವುಗಳಲ್ಲಿ ಯಾವುದನ್ನು ಕಲಿಕೆಯ ಪ್ರಧಾನ ಅಂಶವೆಂದು ಪರಿಗಣಿಸಿಲ್ಲ ?

(1) ಜ್ಞಾನ ಗ್ರಹಿಕೆ (Cognitive)

(2) ಸಮಾಜೋ–ಸಾಂಸ್ಕೃತಿಕ (Socio-cultural)

(3) ಭಾವಾಭಿವ್ಯಂಜಕ (Affective)

(4) ಮಾನಸ ಚಾಲನೆ (Psychomotor)

**149.** ಬಹುಭಾಷಿಕತೆ ಮತ್ತು ಬಹುಸಂಸ್ಕೃತಿಯನ್ನು ವ್ಯಾಪಕಗೊಳಿಸಲು ಈ ಕೆಳಕಂಡ ಪ್ರಕಾರಗಳ ಕತೆಗಳಲ್ಲಿ ಯಾವ ಕತೆ ಹೆಚ್ಚು ಸಂಬಂಧಪಟ್ಟಿರುತ್ತದೆ ?

(1) ಜಾನಪದ ಕತೆಗಳು

(2) ಆತ್ಮಚರಿತ್ರೆಗಳು

(3) ವೈಜ್ಞಾನಿಕ ಕಾಲ್ಪನಿಕ ಕತೆಗಳು

(4) ಉತ್ಪ್ರೇಕ್ಷಿತ ಕತೆಗಳು (Lengthy tales)

**150.** ಸ್ಟೀಫನ್ ಕ್ರಶೇನ್ (Stephen Krashen) ನೀಡಿದ ಮೇಲ್ವಿಚಾರಣಾ ಪ್ರಮೇಯಕ್ಕೆ (Monitor hypothesis) ಸಂಬಂಧಿಸಿದಂತೆ ಈ ಕೆಳಕಂಡ ಯಾವ ಹೇಳಿಕೆ ಸರಿಯಲ್ಲ ?

(1) ದ್ವಿತಿಯ ಭಾಷಾರ್ಜನೆಯ ಸಂಬಂಧದಲ್ಲಿ ಇದನ್ನು ಬಳಸಲಾಗಿದೆ.

(2) ಅರ್ಜನೆ ಮತ್ತು ಕಲಿಕೆಯ ನಡುವಿನ ಸಂಬಂಧವನ್ನಾಧರಿಸಿದೆ.

(3) ಏನನ್ನು 'ಅರ್ಜಿಸಲಾಗಿದೆಯೋ' ಅದು ಏನನ್ನು 'ಕಲಿಯಲಾಗಿದೆಯೋ' ಅದನ್ನು ಮೇಲ್ವಿಚಾರಣೆ ಮಾಡಲು ಸಹಾಯಕವಾಗುತ್ತದೆ.

(4) ಅವನು/ಅವಳು ಸಾಕಷ್ಟು ಸಮಯವನ್ನು ಕೊಟ್ಟಿದ್ದಾರೆಯೇ ಮತ್ತು ನಿಯಮಗಳ ಬಗ್ಗೆ ಸಾಕಷ್ಟು ಜ್ಞಾನವನ್ನು ಹೊಂದಿದ್ದಾರೆಯೇ ಎಂಬುದನ್ನು ಮಾತ್ರ ಕಲಿಯುವವರು ಮೇಲ್ವಿಚಾರಣೆ ಮಾಡಬಹುದು.

- o 0 o -

www.careerindia.com

CAREERINDIA

SPACE FOR ROUGH WORK

www.careerindia.com

CAREERINDIA

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. OMR ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/OMR ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ OMR ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ OMR ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

www.careerindia.com

CAREERINDIA

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस OMR उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक OMR उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं OMR उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं OMR उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/OMR उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना OMR उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने OMR उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और OMR उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व OMR उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the OMR Answer Sheet is not folded. Do not make any stray marks on the OMR Answer Sheet. Do not write your Roll No. anywhere else except in the specified space in the OMR Answer Sheet.
4. Handle the Test Booklet and OMR Answer Sheet with care, as under no circumstances (except for discrepancy in Test Booklet Code or Number and OMR Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/OMR Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their OMR Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the OMR Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and OMR Answer Sheet shall be detached under any circumstances.
15. **On completion of the test, the candidate must hand over the OMR Answer Sheet to the Invigilator in the Hall / Room.** ***The candidates are allowed to take away this Test Booklet with them.***

www.careerindia.com